ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 05/03/2020

# ಸಂವಿಧಾನದ ಆಶಯಗಳಿಗೆ ಗರ್ಭಗುಡಿ ಸಂಸ್ಕೃತಿ ಮಣ್ಣು

5/3/20

ಸಂ.ಕ.ಸಮಾಚಾರ ಬೆಂಗಳೂರು

1952ರ ಸಾರ್ವತ್ರಿಕ ಚುನಾವಣೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಮುಂಚೂಣಿಗೆ ತಂದು ಗೆಲ್ಲಿಸಬೇಕಾಗಿತ್ತು. ತಪ್ಪು ಯಾರು ಮಾಡಿದರೂ ತಪ್ಪೇ. ಇಂದು ಪ್ರಜಾಪ್ರಭುತ್ವ ಸಾಯುತ್ತಿದೆ. ರಾಜಕೀಯ ಪಕ್ಷಗಳ ಒಳಗೆ ಆಂತರಿಕ ಪ್ರಜಾಪ್ರಭುತ್ವ ನಾಶವಾಗಿರುವುದು ದೇಶದ ಪ್ರಜಾಪ್ರಭುತ್ವದ ಸಾವಿಗೆ ಕಾರಣ. ಗರ್ಭಗುಡಿ ಸಂಸ್ಕೃತಿ ಸಂವಿಧಾನದ ಆಶಯಗಳನ್ನು ವಿಫಲಗೊಳಿಸಿದೆ ಎಂದು ಮಾಜಿ ಸ್ಪೀಕರ್ ಕೆ.ಆರ್. ರಮೇಶ ಕುಮಾರ್ ನೋವಿನಿಂದ ನುಡಿದರು.



ಜೊತೆಗೆ ನ್ಯಾಯಾಂಗ ವ್ಯವಸ್ಥೆಯ ಕುರಿತೂ ತಮ್ಮದೇ ಆದ ಅಸಮಾಧಾನಗಳನ್ನು ಹೊರಹಾಕಿದರು. ನಿಂದನಾ ಭಯದಿಂದ ಈ ವ್ಯವಸ್ಥೆಯ ಕುರಿತೇ ಮಾತನಾಡದಂತಾಗಿದೆ. ಸಂವಿಧಾನ ಬರುವ ಮೊದಲು ಸುಖ ಇರ್‍ಲಿ, ಕನಸು ಕಾಣುವ ಅವಕಾಶಗಳೂ ಜನತೆಗೆ, ಅದರಲ್ಲೂ ದಮನಿತರಿಗೆ ಇರಲಿಲ್ಲ ಎಂದು ಸದನದಲ್ಲಿ ಹೇಳಿದರು.

ಸ್ವಾತಂತ್ರ್ಯ ಹೋರಾಟ, ಗಾಂಧೀಜಿ, ನೆಹರೂ, ಅಂಬೇಡ್ಕರ್ ಹಾಗೂ ಇಡೀ ಸಂವಿಧಾನ ಮತ್ತು ಇತಿಹಾಸ ಕುರಿತು ಸುದೀರ್ಘ ಉಪನ್ಯಾಸ ನೀಡಿದರು. ಸಂವಿಧಾನ ಆಶಯಗಳನ್ನು ಜಾರಿಗೆ ತರಲು ಅಗತ್ಯವಾದ ಸಲಹೆಗಳನ್ನು ನೀಡಿದರು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕೇವಲ ಬಿಜೆಪಿಯವರಾಗಿರದೇ, ದೇಶದ ಆಸ್ತಿ ಎಂದು ಆಡಳಿತ ಪಕ್ಷದ ಸಾಲಿನಿಂದ ಚಪ್ಪಾಳೆ ಗಿಟ್ಟಿಸಿತು.

ಗ್ರಾಪಂ ಚುನಾವಣೆಗಳಿಗೆ ಮುನ್ನವೇ ಅಧ್ಯಕ್ಷ ಉಪಾಧ್ಯಕ್ಷ ಮೀಸಲಾತಿ ಘೋಷಿಸಿ. ಆಗ ಅಂಬೇಡ್ಕರ್ ಆಶಯಕ್ಕೆ ಅರ್ಥ ಬರುತ್ತದೆ ಎಂದು ಕೋರಿದರು. ಅಂಬೇಡ್ಕರ್ ಆಶಯಗಳನ್ನು ಜಾರಿಗೆ ತರುವಂತೆ ಕೇಂದ್ರಕ್ಕೆ ಸದನ ಸರ್ವಾನುಮತದ ಶಿಫಾರಸು ಮಾಡಿ ಕಳುಹಿಸಬೇಕೆಂದು ಸಲಹೆ ಮಾಡಿದರು. ಅಸ್ಪೃಶ್ಯತೆ ಎಂಬುದು ಕೇವಲ ಭಾರತದಲ್ಲಿ ಮಾತ್ರ ಇಲ್ಲ. ಇಡೀ ವಿಶ್ವದೆಲ್ಲೆಡೆ ಇದೆ ಎಂದು ಚರ್ಚೆಯ ಮಧ್ಯ ಪ್ರವೇಶಿಸಿದ ಬಿಜೆಪಿ ಶಾಸಕ ಅರವಿಂದ ಬೆಲ್ಲದ ಹೇಳಿದರು. ಅರವಿಂದ ಲಿಂಬಾವಳಿ, ಡಿ.ಕೆ.ಶಿವಕುಮಾರ, ಶಿವಲಿಂಗೇಗೌಡ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

### ಹುಚ್ಚ ಅಂತಾರೆ

ನಾನು ಯಾರಾದ್ದಾದರೂ ಕಾಲಿಗೆ ತಲೆ ಹಚ್ಚಿ ನಮಸ್ಕರಿಸಬೇಕಾದರೆ, ಎದುರಿನವರ ಕಾಲು ನನ್ನ ಕಾಲಿಗಿಂತ ಸ್ವಚ್ಛವಾಗಿದೆಯೇ ಎಂಬುದನ್ನು ನೋಡುವೆ. ಹೀಗೆ ನಾನು ಮಾತನಾಡಿದರೆ ಹುಚ್ಚ–ತಲೆಹರಟೆ ಎನ್ನುತ್ತಾರೆ. ಎಲ್ಲ ಕಾಲದಿಂದಲೂ ವೈಚಾರಿಕರನ್ನು ಸಮಾಜ ಹುಚ್ಚ ಎನ್ನುತ್ತಲೇ ಇದೆ.

–ಕೆ.ಆರ್.ರಮೇಶಕುಮಾರ,
ಮಾಜಿ ಸ್ಪೀಕರ್